ಊ) ಮೂರು ತಿಂಗಳೊಳಗೆ ವರದಿಯನ್ನು ಸಲ್ಲಿಸಲು ಸಮಿತಿಗೆ ಸೂಚಿಸಲಾಗಿದೆ.

ನೀರಿನ ದರ ಪರಿಷ್ಕರಣೆ

55(1955); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರು ಜಲ ಮಂಡಳಿಯು ಕುಡಿಯುವ ನೀರಿನ ದರಗಳನ್ನು ಪರಿಷ್ಕರಿಸಿದೆಯೇ;

ಆ) ಹಾಗಿದ್ದಲ್ಲಿ ಹಿಂದಿನ ದರ, ಪರಿಷ್ಕೃತ ದರಗಳ ವಿವರಗಳೇನು: (ಅಪಾರ್ಟ್‌ಮೆಂಟ್ ಗ್ರಾಹಕರಿಗೆ ನೀಡುವ ನೀರಿನ ದರಗಳ ವಿವರ ನೀಡುವುದು)

ಇ) ಈ ರೀತಿ ನೀರಿನ ದರಗಳನ್ನು ಏರಿಸಲು ಕಾರಣಗಳೇನು: ಹಾಗೂ ಈ ಪರಿಷ್ಕೃತ ದರಗಳಿಂದ ಬರತಕ್ಕ ಹೆಚ್ಚುವರಿ ವರಮಾನವೆಷ್ಟು;

ಈ) ಬೆಂಗಳೂರು ನಗರದಲ್ಲಿ ಪ್ರತಿದಿನ ಸೋರಿಕೆ ಯಾಗುವ ನೀರಿನ ಪ್ರಮಾಣವೆಷ್ಟು;

ಉ) ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆಯೇ:

ಊ) ಹಾಗಿದ್ದಲ್ಲಿ, ಈ ನೀರಿನ ದರಗಳ ಏರಿಕೆಯನ್ನು ರದ್ದುಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು.

ಆ) ಅಪಾರ್ಟ್‌ಮೆಂಟ್ ಗ್ರಾಹಕರಿಗೆ ನೀಡುವ ನೀರಿನ ದರಗಳ ವಿವರಗಳು ಈ ಕೆಳಕಂಡಂತಿರುತ್ತದೆ.

1) ಹಿಂದಿನ ದರ : ₹ 19/– ಪ್ರತಿ ಕಿ.ಲೀ.

2) ಪರಿಷ್ಕೃತ ದರ : ₹ 22/– ಪ್ರತಿ ಕಿ.ಲೀ.

ಇ) ಬೆಂಗಳೂರು ಜಲಮಂಡಳಿಯು ನೀರಿನ ಮತ್ತು ಒಳಚರಂಡಿ ದರಗಳ ಪರಿಷ್ಕರಣೆಯನ್ನು ದಿನಾಂಕ: 01.01.2005 ರಲ್ಲಿ ಮಾಡಲಾಗಿದ್ದು, ಹಿಂದಿನ 9 ವರ್ಷಗಳ ಅವಧಿಯಲ್ಲಿ ನೀರಿನ ಸಂಸ್ಕರಣೆ ಮತ್ತು ಪೂರೈಕೆಯ ನಿರ್ವಹಣಾ ವೆಚ್ಚ, ವಿದ್ಯುತ್ ವೆಚ್ಚ, ಸಿಬ್ಬಂದಿ ವೇತನ, ತೈಲ ಬೆಲೆಗಳು ಹಾಗೂ ಇತರೆ ಬಳಕೆಗಳ ವೆಚ್ಚಚಗಳೆಲ್ಲವು ದುಪ್ಪಟ್ಟಿನಷ್ಟು ಏರಿಕೆಯಾಗಿರುತ್ತವೆ.

ಮಂಡಳಿಯು ಕಾರ್ಯಚರಣೆ ಮತ್ತು ನಿರ್ವಹಣಾ ವೆಚ್ಚ, ವಿದ್ಯುತ್ ವೆಚ್ಚ ಹಾಗೂ ಇತರೆ ಎಲ್ಲಾ ವೆಚ್ಚಗಳನ್ನು ಒಳಗೊಂಡಂತೆ ದುಬಾರಿ ವೆಚ್ಚಗಳನ್ನು ಭರಿಸುತ್ತಿದೆ ಹಾಗೂ ಈ ವೆಚ್ಚಗಳನ್ನು ಪ್ರಸ್ತುತ ಆದಾಯದಲ್ಲಿ ಸರಿದೂಗಿಸಲು ಕಷ್ಟಸಾಧ್ಯವಾಗಿರುತ್ತದೆ.

ಈ ಪರಿಷ್ಕೃತ ದರಗಳಿಂದ ಪ್ರತಿ ಮಾಹೆಯಾನ ₹ 1200 ರಿಂದ 1500 ಲಕ್ಷಗಳು ಹೆಚ್ಚುವರಿಯಾಗಿ ವರಮಾನ ಬರುತ್ತದೆ.

ಈ) ಬೆಂಗಳೂರು ನಗರಕ್ಕೆ ಪೂರೈಕೆಯಾಗುವ ನೀರಿನಲ್ಲಿ 46% ರಷ್ಟು ನೀರು ಸೋರಿಕೆಯಾಗುವುದು ಕಂಡುಬಂದಿರುತ್ತದೆ.

ಉ) ನೀರಿನ ಸೋರಿಕೆಯನ್ನು ತಡೆಗಟ್ಟಲು ಜಲಮಂಡಳಿಯು 3 ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.

1. (ಕಾಂಟ್ರಾಕ್ಟ್ ಡಿ2ಬಿ) ಬೆಂಗಳೂರು ದಕ್ಷಿಣ ಭಾಗದಲ್ಲಿ 52 ಚ.ಕಿ.ಮೀ ವಿಸ್ತೀರ್ಣ ಮತ್ತು 1,05,696 ನೀರಿನ ಸಂಪರ್ಕಗಳನ್ನೊಳಗೊಂಡು ಪ್ರತೀ ಮನೆಗೂ ಸೇರಿದಂತೆ ದಕ್ಷಿಣ ಭಾಗದಲ್ಲಿ ನೀರಿನ ಸೋರಿಕೆ ತಡೆಗಟ್ಟುವ ಕಾಮಗಾರಿಯನ್ನು ಜೂನ್ 2012ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದ್ದು, 3 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

2. (ಕಾಂಟ್ರಾಕ್ಟ್ ಡಿ2ಎ) ಬೆಂಗಳೂರು ಪಶ್ಚಿಮ ಭಾಗದಲ್ಲಿ 54 ಚ.ಕಿ.ಮೀ ವಿಸ್ತೀರ್ಣ ಮತ್ತು 1,33,000 ನೀರಿನ ಸಂಪರ್ಕಗಳನ್ನೊಳಗೊಂಡು ಪ್ರತೀ ಮನೆಗೂ ಸೇರಿದಂತೆ ಪಶ್ಚಿಮ ಭಾಗದಲ್ಲಿ ನೀರಿನ ಸೋರಿಕೆ ತಡೆಗಟ್ಟುವ ಕಾಮಗಾರಿಯನ್ನು ನವೆಂಬರ್ 2013ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದ್ದು, 3 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

3. (ಕಾಂಟ್ರಾಕ್ಟ್ ಡಿ1ಎ) ಬೆಂಗಳೂರು ಕೇಂದ್ರ ಭಾಗದಲ್ಲಿ ನೀರಿನ ಸೋರಿಕೆ ತಡೆಗಟ್ಟುವ ಕಾಮಗಾರಿಯನ್ನು ಪ್ರಾರಂಭಿಸಲು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. 28.50ಚ.ಕಿ.ಮೀ ವಿಸ್ತೀರ್ಣ ಮತ್ತು 63,766 ನೀರಿನ ಸಂಪರ್ಕಗಳಿದ್ದು, ಸದರಿ ಕಾಮಗಾರಿಯನ್ನು 3 ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

4. ಬಾಕಿ ಇರುವ ಬೆಂಗಳೂರು ಪೂರ್ವ, ಆಗ್ನೇಯ ಮತ್ತು ಉತ್ತರ ವಲಯಗಳಲ್ಲಿ ನೀರು ಸೋರಿಕೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅನುದಾನ ನೀಡುವ ಸಂಸ್ಥೆಯನ್ನು ಗುರುತಿಸುವ ಕಾರ್ಯ ಪರಿಶೀಲನಾ ಹಂತದಲ್ಲಿದೆ.

ಊ) ನೀರಿನ ದರಗಳ ಏರಿಕೆಯನ್ನು ರದ್ದುಗೊಳಿಸಲು ಸರ್ಕಾರ ಉದ್ದೇಶಿಸಿರುವುದಿಲ್ಲ.

ಸಫಾಯಿ ಕರ್ಮಚಾರಿ ಸಮುದಾಯಕ್ಕೆ ಪುನರ್ವಸತಿ

56(106); ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ)

ಅ) ರಾಜ್ಯದಲ್ಲಿರುವ ಸಫಾಯಿ ಕರ್ಮಚಾರಿ ಸಮುದಾಯದ ಜನಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)